ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

---

**ಸಂಖ್ಯೆ : ವಾಇ : ಉ ನಿ : ಸುಮಪ : 2017–18** **ದಿನಾಂಕ: 22–11–2018**

# ಪತ್ರಿಕಾ ಆಮಂತ್ರಣ

1. ಪತ್ರಿಕಾಗೋಷ್ಠಿ:
   ಆರ್.ವಿ. ದೇಶಪಾಂಡೆ,
   ಕಂದಾಯ ಸಚಿವರು.

   ದಿನಾಂಕ: 23–11–2018, ಶುಕ್ರವಾರ, ಸಮಯ: ಸಂಜೆ 4–00 ಗಂಟೆಗೆ
   ಸ್ಥಳ: ಕೊಠಡಿ 334, ವಿಧಾನಸೌಧ, ಬೆಂಗಳೂರು.

**ಸಂಖ್ಯೆ 1326/1426**

# ಪತ್ರಿಕಾ ಪ್ರಕಟಣೆ

## ಬೀದಿ ವ್ಯಾಪಾರಿಗಳಿಗಾಗಿ "ಬಡವರ ಬಂಧು" ನೂತನ ಯೋಜನೆ

ಬೆಂಗಳೂರು, ನವೆಂಬರ್ 22, (ಕರ್ನಾಟಕ ವಾರ್ತೆ)

ಬೀದಿ ವ್ಯಾಪಾರಿಗಳಿಗಾಗಿ ರಾಜ್ಯ ಸರ್ಕಾರ ಆರಂಭಿಸಿರುವ "ಬಡವರ ಬಂಧು" ನೂತನ ಯೋಜನೆಯಡಿ ಬಡ್ಡಿರಹಿತ ನೀಡುವ ಸಾಲವನ್ನು ವ್ಯಾಪಾರಿಗಳು ಸದ್ಬಳಕೆ ಮಾಡಿಕೊಂಡು, ನೆಮ್ಮದಿಯ ಜೀವನವನ್ನು ಕಟ್ಟಿಕೊಳ್ಳಲು ಶ್ರಮಿಸಬೇಕು ಎಂದು ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಬೀದಿ ವ್ಯಾಪಾರಿಗಳಿಗೆ ಕರೆನೀಡಿದರು.

ನಗರದ ಯಶವಂತಪುರ ಎ.ಪಿ.ಎಂ.ಸಿ. ಆವರಣದಲ್ಲಿ ಇಂದು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬಡವರ ಬಂಧು ನೂತನ ಯೋಜನೆಗೆ ಚಾಲನೆ ನೀಡಿ ಮತ್ತು ಫಲಾನುಭವಿಗಳಿಗೆ ಚೆಕ್ ವಿತರಣೆಮಾಡಿ ಮಾತನಾಡಿದ ಅವರು ರಾಜ್ಯದಲ್ಲಿ ಪ್ರಸ್ತುತ 4.50

ಲಕ್ಷ ಬೀದಿ ವ್ಯಾಪಾರಿಗಳಿದ್ದು, ಬೆಂಗಳೂರಿನಲ್ಲಿಯೇ 80,000 ಬೀದಿ ವ್ಯಾಪಾರಿಗಳಿದ್ದಾರೆ. ಅದರಲ್ಲಿ 24,000 ಬೀದಿ ವ್ಯಾಪಾರಿಗಳಿಗೆ ಬಿ.ಬಿ.ಎಂ.ಪಿ ವತಿಯಿಂದ ಈಗಾಗಲೇ ಗುರುತಿನ ಚೀಟಿಯನ್ನು ನೀಡಲಾಗಿದೆ.

ರಾಜ್ಯದಲ್ಲಿ ಲಕ್ಷಾಂತರ ಜನರು ಬೀದಿ ವ್ಯಾಪಾರವನ್ನು ನಂಬಿಕೊಂಡು ಜೀವನ ನಡೆಸುತ್ತಿದ್ದು, ಇದರಲ್ಲಿ ಎಲ್ಲಾ ಜಾತಿ, ಧರ್ಮದ ಜನರಿದ್ದಾರೆ. ಅವರಿಗಾಗಿ ಆರಂಭಿಸಿರುವ "ಬಡವರ ಬಂಧು" ಯೋಜನೆಯಡಿ ಬಡ್ಡಿರಹಿತ 2000 ರೂ ಗಳಿಂದ 10,000 ರೂ.ಗಳ ವರೆಗೆ ಸಾಲ ಪಡೆಯಬಹುದಾಗಿದ್ದು, ಇಲ್ಲಿ ಖಾಸಗಿಯವರ ರೀತಿ ಯಾವುದೇ ತೊಂದರೆಗಳು ಇರುವುದಿಲ್ಲ.

ಈ ವರ್ಷದ ಆಯವ್ಯಯದಲ್ಲಿ ಈ ಯೋಜನೆಯನ್ನು ಘೋಷಣೆ ಮಾಡಲಾಗಿತ್ತು. ಯೋಜನೆಯ ಮೊದಲ ಹಂತವಾಗಿ 53,000 ಬೀದಿ ವ್ಯಾಪಾರಿಗಳಿಗೆ ಬಡ್ಡಿರಹಿತ ಸಾಲವನ್ನು ನೀಡಲು ಉದ್ದೇಶಿಸಲಾಗಿದ್ದು, ಎರಡನೇ ಹಂತದಲ್ಲಿ ರಾಜ್ಯಾದ್ಯಂತ ವಿಸ್ತರಿಸುವ ಮೂಲಕ ಲಕ್ಷಾಂತರ ಬೀದಿ ವ್ಯಾಪಾರಿಗಳಿಗೆ ಸಾಲವನ್ನು ನೀಡಲು ಉದ್ದೇಶಿಸಲಾಗಿದೆ.

ದೇಶದಲ್ಲಿಯೇ ಈ ತರಹದ ಯೋಜನೆಯನ್ನು ಜಾರಿಗೆ ತಂದ ಮೊದಲ ರಾಜ್ಯ ಕರ್ನಾಟಕವಾಗಿದ್ದು ಇತರ ರಾಜ್ಯಗಳಿಗೆ ಮಾದರಿಯಾಗಿದೆ. ಬಡವರ ಮನೆ ಬಾಗಿಲಿಗೆ ಸಾಲ ನೀಡುವ ಈ ನೂತನ ಯೋಜನೆ ಅವರ ಬದುಕಲ್ಲಿ ಬೆಳಕು ತರಲಿ ಹಾಗೂ ಸಾಲವನ್ನು ಸದ್ಬಳಕೆ ಮಾಡಿಕೊಂಡು ನಿಗದಿತ ಸಮಯದಲ್ಲಿ ಹಿಂತಿರುಗಿಸಿ ಮುಂದೆ ದುಪ್ಪಟ್ಟು ಸಾಲ ಪಡೆದು ಉತ್ತಮ ಜೀವನವನ್ನು ರೂಪಿಸಿಕೊಳ್ಳಲಿ ಎಂದು ಹೇಳಿದರು.

ಯೋಜನೆಯ ಸಂಚಾರಿ ಸೇವಾ ವಾಹನಕ್ಕೆ ಹಸಿರು ನಿಶಾನೆ ತೋರಿದ ನಂತರ ಮಾತನಾಡಿದ ಉಪ ಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವರು ಸಮ್ಮಿಶ್ರ ಸರ್ಕಾರ ಬಡವರಪರ ಸರ್ಕಾರವಾಗಿದ್ದು , ಸಮಾಜದ ಪ್ರತಿಯೊಬ್ಬರಿಗೂ ಸರ್ಕಾರದ ಯೋಜನೆಗಳು ತಲುಪಲಿ ಎಂಬ ಉದ್ದೇಶದಿಂದ ಬೀದಿ ವ್ಯಾಪಾರಿಗಳನ್ನು ಅಧಿಕಾರಿಗಳೊಂದಿಗೆ ಖುದ್ದಾಗಿ ಭೇಟಿಮಾಡಿ ಅವರು ಪಡೆಯುತ್ತಿರುವ ಬಡ್ಡಿ ಸಾಲದ ತೊಂದರೆಗಳ ಕುರಿತು ಮಾಹಿತಿ ಪಡೆದ ನಂತರ "ಬಡವರ ಬಂಧು" ಯೋಜನೆಯನ್ನು ರೂಪಿಸಿ ಅವರಿಗೆ ಬಡ್ಡಿರಹಿತ ಸಾಲವನ್ನು ನೀಡಲು ತೀರ್ಮಾನಿಸಲಾಯಿತು ಎಂದು ಹೇಳಿದರು.

ತುಮಕೂರು ಜಿಲ್ಲೆಯ ಹೂ ಮಾರುವ ಬೀದಿ ವ್ಯಾಪಾರಿ ಒಬ್ಬರ ಮಗ ಐ.ಎ.ಎಸ್. ಅಧಿಕಾರಿಯಾದ ಕಥೆಯನ್ನು ಹೇಳಿ ನೆರೆದಿದ್ದ ಬೀದಿ ವ್ಯಾಪಾರಿಗಳನ್ನು ಹುರಿದುಂಬಿಸಿದ ಅವರು

ಬಡ್ಡಿ ಸಾಲ ಪಡೆದು ಸಾಲ ನೀಡಿದವರಿಂದ ಕಿರುಕುಳ ಅನುಭವಿಸಿ ಮಾನಸಿಕ ನೆಮ್ಮದಿಯನ್ನು ಕಳೆದುಕೊಳ್ಳುವ ಬದಲು ಈ ಯೋಜನೆಯಡಿ ಸಿಗುವ ಬಡ್ಡಿರಹಿತ ಸಾಲವನ್ನು ಪಡೆದು ಉತ್ತಮ ಜೀವನ ರೂಪಿಸಿಕೊಂಡು ಮಕ್ಕಳಿಗೆ ಶಿಕ್ಷಣ ಕೊಡಿಸುವತ್ತ ಬೀದಿ ವ್ಯಾಪಾರಿಗಳು ಚಿಂತಿಸಬೇಕು.

ಇಂತಹ ಯೋಜನೆಗಳು ಫಲಶೃತಿ ಕಾಣಲು ಅಧಿಕಾರಿಗಳು ಯಶಸ್ವಿಯಾಗಿ ಕರ್ತವ್ಯ ನಿರ್ವಹಿಸಬೇಕು ಅಗತ್ಯ ಫಲಾನುಭವಿಗಳಿಗೆ ಯೋಜನೆ ತಲುಪುವಂತೆ ಶ್ರಮವಹಿಸಬೇಕು ಎಂದು ಹೇಳಿದರು.

ಸಹಕಾರಿ ಕ್ಷೇತ್ರದ ಪಿತಾಮಹ ಸಿದ್ಧನಗೌಡ ಸಣ್ಣರಾಯನಗೌಡ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ ನಂತರ ಮಾತನಾಡಿದ ಸಹಕಾರ ಸಚಿವ ಬಂಡೆಪ್ಪ ಖಾಶಂಪುರ ಅವರು ಈ ಬೃಹತ್ ಯೋಜನೆಯಡಿ ರಾಜ್ಯದ 16 ಬ್ಯಾಂಕ್‌ಗಳು ಪ್ರಸ್ತುತ ಭಾಗಿಯಾಗಿ ಬೀದಿ ವ್ಯಾಪರಿಗಳಿಗೆ ಸಾಲ ನೀಡಲು ಮುಂದಾಗಿದ್ದು, ಮುಂದೆ ಈ ಯೋಜನೆಯನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಿಗೂ ವಿಸ್ತರಿಸಿ ಪ್ರತಿ ಜಿಲ್ಲೆಯಿಂದ ಒಂದಕ್ಕೂ ಹೆಚ್ಚು ಬ್ಯಾಂಕ್‌ಗಳನ್ನು ಪಾಲುದಾರರನ್ನಾಗಿ ಮಾಡಿಕೊಂಡು ಜಿಲ್ಲೆಗೊಂದು ನೋಡಲ್ ಬ್ಯಾಂಕ್‌ನ್ನು ರೂಪಿಸಿ ಸರ್ವರಿಗೂ ಈ ಯೋಜನೆಯ ಫಲ ದೊರಕುವಂತಾಗಬೇಕು ಎಂದು ಹೇಳಿದರು.

ಸಹಕಾರಿ ಇಲಾಖೆ ವತಿಯಿಂದ ಸರ್ವರಿಗೂ ಉದ್ಯೋಗ ನೀಡುವ ನೂತನ "ಕಾಯಕ" ಯೋಜನೆಯನ್ನು ರೂಪಿಸುತ್ತಿದ್ದು ಶೀಘ್ರದಲ್ಲಿಯೇ ಈ ಯೋಜನೆಯನ್ನು ಜಾರಿಗೆ ತರಲಾಗುವುದು. ಈ ಯೋಜನೆಯಡಿ ಮಹಿಳಾ ಸ್ವಸಹಾಯ ಸಂಘಗಳಿಗೆ 5 ಲಕ್ಷ ರೂ. ವರೆಗಿನ ಬಡ್ಡಿರಹಿತ ಸಾಲ ಹಾಗೂ 10 ಲಕ್ಷ ರೂ. ಸಾಲಕ್ಕೆ ಶೇ. 3 ರಷ್ಟು ಬಡ್ಡಿ ವಿಧಿಸುವ ಯೋಜನೆ ಸರ್ಕಾರದ ಮುಂದಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದ ಶಾಸಕ ಗೋಪಾಲಯ್ಯ ಅವರು ಮಾತನಾಡಿ ಬಡವರಿಗೆ ಬೀದಿ ವ್ಯಾಪಾರಕ್ಕಾಗಿ ಬಡ್ಡಿರಹಿತ ಸಾಲ ನೀಡುವ ಬಡವರ ಬಂಧು ಯೋಜನೆ ಉದ್ಘಾಟನಾ ಕಾರ್ಯಕ್ರಮ ತಮ್ಮ ಕ್ಷೇತ್ರದಲ್ಲಿ ನಡೆದಿದ್ದಕ್ಕೆ ಹರ್ಷ ವ್ಯಕ್ತಪಡಿಸಿದ ಅವರು ಸರ್ಕಾರ ಇಂತಹ ಅನೇಕ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಬಡವರ ಬದುಕಲ್ಲಿ ಬೆಳಕು ನೀಡುವ ಹಾಗೂ ಭರವಸೆ ನೀಡುವ ಬಡವರಪರ, ರೈತರಪರ ಸರ್ಕಾರವಾಗಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ವಿಧಾನಸಭಾ ಸದಸ್ಯರಾದ ಮುನಿರತ್ನ, ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ, ಬೃಹತ ಬೆಂಗಳೂರು ಮಹಾನಗರಪಾಲಿಕೆಯ ಮಹಾಪೌರ ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

**ಸಂಖ್ಯೆ 1327/1427**

## ನವೆಂಬರ್ 24 ರಂದು ಬೆಂಗಳೂರಿನಲ್ಲಿ 2017 ನೇ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭ

ಬೆಂಗಳೂರು, ನವೆಂಬರ್ 22, (ಕರ್ನಾಟಕ ವಾರ್ತೆ)

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ 2017 ನೇ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭವನ್ನು ನವೆಂಬರ್ 24ರ ಸಂಜೆ 6–00 ಗಂಟೆಗೆ ನಗರದ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರ ರಾಷ್ಟ್ರೀಯ ಸಮಾವೇಶ ಭವನ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಆವರಣದಲ್ಲಿ ಏರ್ಪಡಿಸಲಾಗಿದೆ.

ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಪ್ರಶಸ್ತಿ ಪ್ರದಾನವನ್ನು ಮಾಡುವರು. ಸಮಾರಂಭದ ಗೌರವ ಉಪಸ್ಥಿತಿಯನ್ನು ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವ ಡಿ.ವಿ. ಸದಾನಂದಗೌಡ, ಉಪ ಮುಖ್ಯಮಂತ್ರಿ ಡಾ: ಜಿ. ಪರಮೇಶ್ವರ್ ಅವರು ವಹಿಸುವರು.

ಸಮಾರಂಭದ ಅಧ್ಯಕ್ಷತೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು ಮುಖ್ಯ ಅತಿಥಿಗಳಾಗಿ ಭಾರಿ ಮತ್ತು ಮಧ್ಯಮ ಕೈಗಾರಿಕೆ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಕೆ.ಜೆ. ಜಾರ್ಜ್, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವ ಬಿ. ಝಡ್. ಜಮೀರ್ ಅಹ್ಮದ್ ಖಾನ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಡಾ: ಜಯಮಾಲ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೂಜ್ಯ ಮಹಾ ಪೌರರಾದ ಗಂಗಾಬಿಕೆ ಮಲ್ಲಿಕಾರ್ಜುನ್ ಅವರುಗಳು ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ಬೆಂಗಳೂರು ಕೇಂದದ್ರ ಲೋಕಸಭಾ ಸದಸ್ಯರಾದ ಪಿ.ಸಿ. ಮೋಹನ್, ಬೆಂಗಳೂರು ಗ್ರಾಮಾಂತರ ಲೋಕಸಭಾ ಸದಸ್ಯ ಡಿ.ಕೆ. ಸುರೇಶ್ ಅವರುಗಳು

ವಿಶೇಷ ಆಹ್ವಾನಿತರಾಗಿರುವರು. ರಾಜ್ಯಸಭಾ ಸದಸ್ಯರುಗಳು, ವಿಧಾನ ಪರಿಷತ್ತಿನ ಸದಸ್ಯರುಗಳು, ವಿಧಾನ ಸಭೆಯ ಶಾಸಕರುಗಳು ಭಾಗವಹಿಸಲಿದ್ದಾರೆ.

ಆಹ್ವಾನಿತರಾಗಿ ನಾಗತಿಹಳ್ಳಿ ಚಂದ್ರಶೇಖರ್, ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ಅಕಾಡೆಮಿ ಹಾಗೂ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಚಿನ್ನೇಗೌಡ ಅವರು ಉಪಸ್ಥಿತರಿರುವರು.

**ಸಂಖ್ಯೆ 1328/1428**

## ನ್ಯಾಷನಲ್ ಮೀಡಿಯಾ ಅವಾರ್ಡ್ 2018 ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 22, (ಕರ್ನಾಟಕ ವಾರ್ತೆ)

ಭಾರತ ಚುನಾವಣಾ ಆಯೋಗವು ಚುನಾವಣೆ ಕುರಿತು ಮತದಾನ ಅರಿವು, ಜಾಗೃತಿಯನ್ನು ಮತದಾರರಲ್ಲಿ ಅತ್ಯುತ್ತಮವಾಗಿ ಮೂಡಿಸಿರುವ ಮಾಧ್ಯಮದವರಿಗೆ ನ್ಯಾಷನಲ್ ಮೀಡಿಯಾ ಅವಾರ್ಡ್ 2018 ನ್ನು ನೀಡಲು ಅರ್ಜಿಗಳನ್ನು ಆಹ್ವಾನಿಸಿದೆ.

ಮುದ್ರಣ ಮಾಧ್ಯಮ, ಎಲೆಕ್ಟ್ರಾನಿಕ್ ಮಾಧ್ಯಮ(ಟೆಲಿವಿಷನ್), ಆಕಾಶವಾಣಿ(ರೇಡಿಯೋ) ಹಾಗೂ ಆನ್‌ಲೈನ್(ಇಂಟರ್‌ನೆಟ್/ಸೋಶಿಯಲ್ ಮೀಡಿಯಾ) ಎಂದು ನಾಲ್ಕು ವಿಭಾಗಗಳಾಗಿ ಮಾಡಲಾಗಿದೆ. ಅರ್ಜಿ ಸಲ್ಲಿಸಲು ನವೆಂಬರ್ 30, 2018 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗೆ ಶ್ರೀ ಪವನ್ ದಿವಾನ್, ಅಧೀನ ಕಾರ್ಯದರ್ಶಿ, (ಕಮ್ಯುನಿಕೇಷನ್) ಭಾರತ ಚುನಾವಣಾ ಆಯೋಗ, ನಿರ್ವಾಚನ್ ಸದನ್, ಅಶೋಕ ರಸ್ತೆ, ನವ ದೆಹಲಿ –110 001. email: media.election.eci@gmail.com, diwaneci@yahoo.co.in, ದೂರವಾಣಿ 011–23052133 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ 1329/1429**

## Science in Action

Bengaluru, November 22 (Karnataka Information)

Jawaharlal Nehru Planetarium, Bengaluru is organsizing its annual three-day Science Exhibition entitled "Science in Action" from November 23, 2018. Selected experiments from about 18 schools will be on display. Programme will be inaugurated by K. Madan Gopal, Director, Visvesvaraya Industrial and Technological Museum, Bengaluru, at the Jawaharlal Nehru Planetarium on November 23rd at 9-30 a.m. says official press release.

**ಸಂಖ್ಯೆ 1330/1430**

## ಮಾಧ್ಯಮ ಆಮಂತ್ರಣ:-

**ದಿನಾಂಕ: 23.11.2018 ರಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನೌಕರರ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವವನ್ನು ಆಯೋಜಿಸಿರುವ ಕುರಿತು.**

*******

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನೌಕರರ ಸಂಘದ ವತಿಯಿಂದ ದಿನಾಂಕ: 23.11.2018 ರಂದು ಮಧ್ಯಾಹ್ನ: 03:30 ಗಂಟೆಗೆ, ಕನ್ನಡ ರಾಜ್ಯೋತ್ಸವ ಸಮಾರಂಭವನ್ನು **ಬೆಂಗಳೂರು ಜಲ ಮಂಡಳಿಯ ರಜತ ಭವನ,** ಮಲ್ಲೇಶ್ವರಂ 8ನೇ ಮುಖ್ಯ ರಸ್ತೆ, 18 ನೇ ಅಡ್ಡರಸ್ತೆ, ಬೆಂಗಳೂರು, ರಲ್ಲಿ ಆಯೋಜಿಸಲಾಗಿರುತ್ತದೆ. **ಸನ್ಮಾನ್ಯ ಡಾ॥ಜಿ ಪರಮೇಶ್ವರ್ ರವರು, ಮಾನ್ಯ ಉಪ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ,** ಇವರು ಸಮಾರಂಭವನ್ನು ಉದ್ಘಾಟಿಸಲಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಬೆಂಗಳೂರು ಜಲಮಂಡಳಿಯ ಅಧ್ಯಕ್ಷರಾದ **ಸನ್ಮಾನ್ಯ ಶ್ರೀ ತುಷಾರ್ ಗಿರಿ ನಾಥ್,** ಭಾ.ಆ.ಸೇ., **ರವರು ವಹಿಸಲಿದ್ದು, ಪ್ರಧಾನ ಭಾಷಣವನ್ನು ನಾಡೋಜ ಪ್ರೊ॥ ಹಂಪ ನಾಗರಾಜಯ್ಯ ರವರು, ಖ್ಯಾತ ಸಾಹಿತಿಗಳು ಹಾಗೂ ಸಂಶೋಧಕರು, ಅಧ್ಯಕ್ಷರು, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ಹಾಗೂ ಖ್ಯಾತ ಚಲನಚಿತ್ರ ನಟರಾದ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಮತ್ತು ವಿನಯ್ ರಾಜ್‌ಕುಮಾರ್** ರವರು ಆಗಮಿಸಲಿದ್ದಾರೆ.

ಮಂಡಳಿಯ ಎಲ್ಲಾ ಅಧಿಕಾರಿಗಳು ಹಾಗೂ ನೌಕರರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿದ್ದು, ಸದರಿ ಸಮಾರಂಭದ ಮಾಹಿತಿಯನ್ನು ತಮ್ಮ ಪತ್ರಿಕೆಯ ನಗರದಲ್ಲಿ ನಡೆಯುವ ಕಾರ್ಯಕ್ರಮಗಳ ಪಟ್ಟಿಯ ಅಂಕಣದಲ್ಲಿ ಪ್ರಕಟಿಸಲು ಕೋರಿದೆ.

ದಿನಾಂಕ: 23.11.2018 ರಂದು ಮಧ್ಯಾಹ್ನ: 03:30 ಗಂಟೆಗೆ, ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಬೆಂಗಳೂರು ಜಲ ಮಂಡಳಿಯ ರಜತ ಭವನ, ಮಲ್ಲೇಶ್ವರಂ 8ನೇ ಮುಖ್ಯ ರಸ್ತೆ, 18 ನೇ ಅಡ್ಡರಸ್ತೆ, ಬೆಂಗಳೂರು,

**ಸಂಖ್ಯೆ 1331/1431**

# ನವೆಂಬರ್ 27 ರಂದು ಸಂವಿಧಾನ ದಿನಾಚರಣೆ

ಬೆಂಗಳೂರು, ನವೆಂಬರ್ 22, (ಕರ್ನಾಟಕ ವಾರ್ತೆ)

ಪ್ರತಿ ವರ್ಷ ನವೆಂಬರ್ 26 ರಂದು "ಸಂವಿಧಾನ ದಿನ" ವನ್ನು ಆಚರಿಸಲಾಗುತ್ತಿದೆ. ಈ ವರ್ಷ ನವೆಂಬರ್ 26 ರಂದು ಕನಕದಾಸ ಜಯಂತಿ ಹಿನ್ನಲೆಯಲ್ಲಿ ರಜಾ ದಿನವಾಗಿರುವುದರಿಂದ ನವೆಂಬರ್ 27 ರಂದು ಆಚರಿಸಲಾಗುವುದು ಎಂದು ಕರ್ನಾಟಕ ಸರ್ಕಾರದ ಸಚಿವಾಲಯದ ಪ್ರಕಟಣೆ ತಿಳಿಸಿದೆ.

**ಸಂಖ್ಯೆ 1332/1432**

# ಖಾದ್ಯವಸ್ತುಗಳ ಮಾರಾಟ ಮಳಿಗೆ – ಸ್ಥಾಪನೆಗಾಗಿ ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 22, (ಕರ್ನಾಟಕ ವಾರ್ತೆ)

2018–19 ನೇ ಸಾಲಿನಲ್ಲಿ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಮಂಜೂರಾದ ಸಂಚಾರಿ ಮಾಂಸ ಮತ್ತು ಮಾಂಸದಿಂದ ತಯಾರಿಸಿದ ಖಾದ್ಯವಸ್ತುಗಳ ಮಾರಾಟ ಮಳಿಗೆ ಸ್ಥಾಪನೆ ಯೋಜನೆ ಅಡಿಯಲ್ಲಿ ಅನುಷ್ಠಾನಗೊಳಿಸಲು ಬೆಂಗಳೂರು ನಗರ ಜಿಲ್ಲೆಗೆ ಗುರಿಗಳನ್ನು ನಿದಿಪಡಿಸಿ ನಿಗಮದಿಂದ ಅದರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ಅರ್ಜಿದಾರರನ್ನು ಆಯ್ಕೆಗೆ ಪರಿಗಣಿಸಿ, ಜಿಲ್ಲಾ ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲಾಗುವುದು.

ಸಂಚಾರಿ ಮಾಂಸ ಹಾಗೂ ಮಾಂಸದಿಂದ ತಯಾರಿಸಿದ ಖಾದ್ಯವಸ್ತುಗಳ ಮಾರಾಟ ಮಳಿಗೆ ಸ್ಥಾಪನೆ ಯೋಜನೆಯಡಿ ಬೆಂಗಳೂರು ನಗರ ಜಿಲ್ಲೆಯ ಪರಿಶಿಷ್ಟ ಜಾತಿ –3 ಪರಿಶಿಷ್ಟ

ಪಂಗಡ–2 ಒಟ್ಟು – 5 ಘಟಕದ ಮೊತ್ತ ರೂ 11,00,000–00 ಲಕ್ಷ , ಸಾಲದ ಮೊತ್ತ ರೂ. 2,75,000–00 ಲಕ್ಷ, ಸಹಾಯಧನ – 8,25,000/– ಲಕ್ಷ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಆಯಾ ಘಟಕ ವೆಚ್ಚದ ಶೇ 75 ಸಹಾಯಧನವನ್ನು (ರೂ 8,25,000–00) ಲಕ್ಷ ಸಾಲ ಮಂಜೂರು ಮಾಡುವ ಬ್ಯಾಂಕ್‌ಗಳ ಮುಖಾಂತರ ಪಾವತಿಸಲಾಗುವುದು.

ಯೋಜನೆಯ ಒಟ್ಟು ಫಲಾನುಭವಿಗಳ ಸಂಖ್ಯೆಯಲ್ಲಿ ಶೇ. 33 ರಷ್ಟ ಮಹಿಳೆಯರಿಗೆ, ಶೇ 3 ರಷ್ಟು ಅಂಗವಿಕಲರಿಗೆ ರಷ್ಟು ಮೀಸಲಿರಿಸಲಾಗಿದೆ. ಈ ಯೋಜನೆಗಳ ಅಡಿಯಲ್ಲಿ ಅರ್ಜಿ ಅಲ್ಲಿಸಲು ಇಚ್ಚಿಸುವ ಫಲಾನುಭವಿಗಳು ಯೋಜನೆಯ ಹೆಚ್ಚಿನ ವಿವರಗಳಿಗೆ ಮತ್ತು ಅರ್ಜಿ ನಮೂನೆಗಾಗಿ ತಾಲ್ಲೂಕಿನ ಸಹಾಯಕ ನಿರ್ದೇಶಕರು ಪಶುಪಲನಾ ಮತ್ತು ಪಶುವೈದ್ಯಸೇವಾ ಇಲಾಖೆ ಇಲ್ಲಿಂದ ಪಡೆದು ಡಿಸೆಂಬರ್ 7 ರೊಳಗೆ ಭರ್ತಿಮಾಡಿದ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಂಖ್ಯೆ 1333/1433**

## ಎಸ್.ಎಸ್.ಎಲ್.ಸಿ. ಪ್ರೋತ್ಸಾಹ ಧನಕ್ಕಾಗಿ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 22, (ಕರ್ನಾಟಕ ವಾರ್ತೆ)

ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಶೇಕಡ 60 ರಿಂದ 74.99 ಹಾಗೂ ಶೇ. 75 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಮಂಜೂರು ಮಾಡುವ ಕುರಿತು ಶಿಕ್ಷಣ ಇಲಾಖಾವತಿಯಿಂದ ಮಂಜೂರಾತಿ ಮಾಡುವ ಬದಲಿಗೆ ಸಮಾಜ ಕಲ್ಯಾಣಾವತಿಯಿಂದ ಈ ಯೋಜನೆಯನ್ನು 2018–19 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಆದ್ದರಿಂದ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿನ ಶಾಲೆಗಳಲ್ಲಿ ವ್ಯಾಸಂಗ ಮಾಡಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು 2018–19 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಶೇಕಡ 60 ರಿಂದ 74.99 ಹಾಗೂ ಶೇ. 75 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಈ ಯೋಜನೆ ಸೌಲಭ್ಯ ಪಡೆಯುವ ಸಲುವಾಗಿ ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ ವಿಳಾಸ www.sw.kar.nic.in ದಲ್ಲಿ ಅರ್ಜಿಗಳನ್ನು ನೋಂದಾಯಿಸಿಕೊಳ್ಳಬಹುದಾಗಿದೆ. ಅರ್ಜಿ ನೋಂದಣಿ ಮಾಡಲು ಡಿಸೆಂಬರ್ 15 ಕೊನೆಯ ದಿನವಾಗಿರುತ್ತದೆ ಎಂದು ಸಮಾಜ ಕಲ್ಯಾಣ ಇಲಾಖಾ ಪ್ರಕಟಣೆ ತಿಳಿಸಿದೆ.

**ಸಂಖ್ಯೆ 1334/1434**

# NATIONAL MEDIA AWARD FOR BEST CAMPAIGN ON VOERS' EDUCATION & AWARENESS- 2018

Bengaluru, November 22, (Karnataka Information)

Election Commission of India invites entries from Media Houses for the National Media Award for best campaign on Voters' Education and Awareness during the year 2018. There shall be four Awards, one each for Print Media, Television (Electronic), Radio (Electronic) ad Online (Internet)/Social Media.

The awards are to recognize the outstanding contribjutions by Media Houses to promote electoral participation by creating awareness abougt accessible elections, educaing people about the electoral process and raising awareness among the general public abou the relevance and importance of voting and registration.

The awards(s) will be in the form of a citation and plaque and will be presented in a function on the relevance Voters' Day ($25^{th}$ January 2019).

Criteria

The Jury will base their assessment on the following criteria:

- Quality of Voter awareness campaign.
- Extent of coverage/Quantity
- Evidence of impact on the public.
- Any other relevant factor(s),

CONDITIONS OF ENTRY

Entries must have been published or broadcast/telecast during the relevant period

Print entries must include:

1. Summary of the work carried out during the relevant period which should include
   i. number of news items/articles.
   ii. total print area in Sq. Cms.
2. A PDF soft copy OR a link to a relevant web address OR a full size photocopy/print copy te newspaper/articles;
3. Details of any other activity like direct public engagement etc.

Broadcast Television (Electronic) and Radio (Electronic) entries must include:

1. A brief on the campaign/work carried out during the relevant period which should include.

i. Material (in a CD or DVD or Pen drive) with duration and frequency of broadcast/telecast and total time of such broadcast of each spot during the period
ii. Sum of the total broadcast time for all spots/nes.
iii. News features or programmes on voter awareness in a CD or DVD or Pen drive or other digital media, alongwith duration, telecast/broadcast date and time and frequency.

2. Any other activity like direct public engagement etc.
3. Any other information.Online (Internet)/Social media entries must include:

1. Summary of the work carried out during the relevant period which should include numbers of posts/blogs/campaigns/tweets/articles etc.
2. APF soft copy of conferned articles OR a link to a relevant wb address.
3. Detail of any other aqctivity like direct public engagement etc.
4. Impact of Online activity (details)
5. Any other information.

Dute Date: Entries must reach before30th November,2018 at the following address : Shri Pawan Diwan, Under Secretary (Communication) Election Commission of India, Nirvachan Sadan, Ashoka Road, New Delhi – 110 001. Email media.election.ect@gmail.com diwaneci@yahoo.co.in Ph. No. 011-23052133.